**ಕರ್ನಾಟಕ ಸರ್ಕಾರ**

ಸಂಖ್ಯೆ:ಬಿಟಿಇ/01/ಇಎಪಿ/2018

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು-560 001,
ದಿನಾಂಕ: 04-07-2018.

**ಸು ತ್ತೋ ಲೆ**

**ವಿಷಯ:** ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳ ಬಗ್ಗೆ.

**ಉಲ್ಲೇಖ:** 1. ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/12, ಬೆಂಗಳೂರು, ದಿ:6-11-1997.
2 ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/98, ಬೆಂಗಳೂರು, ದಿ:11-8-2000
3 ಸರ್ಕಾರಿ ಆದೇಶಸಂ;ಎಫ್‌ಡಿ/11/ಟಿಪಿಇ/2007,ಬೆಂಗಳೂರು,ದಿ:03-12-2007.

-0-

ತಾಂತ್ರಿಕ ಪರೀಕ್ಷಾ ಮಂಡಳಿಯ ವಿವಿಧ ಡಿಪ್ಲೊಮಾ ಕೋರ್ಸುಗಳ ಏಪ್ರಿಲ್/ಮೇ 2018ರ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಹಿಂದಕ್ಕೊಪ್ಪಿಸಲು ಇಚ್ಛಿಸುವ ಅಭ್ಯರ್ಥಿಗಳ ಬಗ್ಗೆ ಪ್ರಿನ್ಸಿಪಾಲರುಗಳು ಅಭ್ಯರ್ಥಿಗಳ ಅಂಕಪಟ್ಟಿಗಳು ಬರುವವರೆಗೆ ಕಾಯದೆ ಫಲಿತಾಂಶದ ಜೊತೆಗೆ ಆನ್‌ಲೈನ್‌ನಲ್ಲಿ (BTE Linx) ಕಳುಹಿಸಿರುವ ಮಾರ್ಕ್ಸ್ ರಿಜಿಸ್ಟರ್‌ನಲ್ಲಿ ಸೂಚಿಸಿರುವ ಅಂಕಗಳ ಆಧಾರದ ಮೇಲೆ ಫಲಿತಾಂಶ ಪ್ರಕಟವಾದ ***01 ತಿಂಗಳೊಳಗಾಗಿ*** **ದಿನಾಂಕ:06-08-2018 ರೊಳಗೆ** ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳನ್ನು ಅಪೇಕ್ಷಿತ ಅಭ್ಯರ್ಥಿಗಳಿಂದ ಪಡೆದು ಕ್ರೋಢೀಕರಿಸಿ ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರಿಗೆ **ದಿನಾಂಕ: 13-08-2018** ***ರೊಳಗೆ*** ಕಳುಹಿಸಿಕೊಡಲು ಸೂಚಿಸಲಾಗಿದೆ. ಅಂಕಪಟ್ಟಿಗಳು ಬರಲಿಲ್ಲವೆಂಬ ಕಾರಣದಿಂದ ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇದಲ್ಲದೆ ಉಲ್ಲೇಖ(2)ರ ಸರ್ಕಾರದ ಆದೇಶದ ಪ್ರಕಾರ **ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ ಶುಲ್ಕ ರೂ.500-00** ಗಳನ್ನು ಅಭ್ಯರ್ಥಿ ಅರ್ಜಿ ಸಲ್ಲಿಸಿದ ದಿನಾಂಕದಿಂದ **03** ದಿನಗಳೊಳಗೆ ಸರ್ಕಾರಕ್ಕೆ ಜಮಾ ಮಾಡಲು ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಸಂಸ್ಥೆಯವರು ಉಲ್ಲೇಖಿಸಿದ **ಸರ್ಕಾರಿ ಆದೇಶದ ಪ್ರಕಾರ ಪ್ರತಿದಿನ ತಡವಾಗಿ ಜಮಾ ಮಾಡಿದುದಕ್ಕೆ ದಂಡ ಶುಲ್ಕವೆಂದು ದಿನವೊಂದಕ್ಕೆ** **ರೂ.1000-00** ಗಳಂತೆ ಪಾವತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ.

**ಕಾರ್ಯದರ್ಶಿ,**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

**ಇವರಿಗೆ,**

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರ ಗಮನಕ್ಕೆ ಮತ್ತು ಮುಂದಿನ ಸೂಕ್ತ ಕ್ರಮಕ್ಕೆ ಕಳುಹಿಸಲಾಗಿದೆ.

**ಪ್ರತಿಗಳು:**

1. ಉಪ ನಿರ್ದೇಶಕರು (ಪರೀಕ್ಷೆ)
2. ಸಹಾಯಕ ನಿರ್ದೇಶಕರುಗಳಿಗೆ (ಪರೀಕ್ಷೆ)
3. ಎಲ್ಲಾ ತಾಂತ್ರಿಕ ಸಹಾಯಕರು (ಪರೀಕ್ಷೆ)
4. ಅಧೀಕ್ಷಕರು (ಪರೀಕ್ಷಾ ವಿಭಾಗ 1 ಮತ್ತು 2)
5. ಇಸಿಎಸ್ ವಿಭಾಗ (1 ರಿಂದ 3) ಆರ್‌ಡಿಎಂ (1) ರಿಂದ (15)
6. ಸಾರ್ವಜನಿಕ ಸಂಪರ್ಕಾಧಿಕಾರಿ (ತಾಂತ್ರಿಕ ಶಿಕ್ಷಣ ಇಲಾಖೆ) ರವರಿಗೆ ಮಾಹಿತಿಗಾಗಿ.
7. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
8. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
9. ಕಛೇರಿ ಪ್ರತಿ.